**ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಎನ್ ಆರ್., ವಾದಿ ಪರ ವಕೀಲರಿಂದ**

**11.** ನಿಡಿ–97 ರ ಕ್ರಯ ಪತ್ರವನ್ನು ರಾಮಸ್ವಾಮಿ ರವರು ಗೋವಿಂದಪ್ಪ ರವರಿಗೆ ಬರೆದುಕೊಟ್ಟಿರುತ್ತಾರೆ. ರಾಮಸ್ವಾಮಿ ರವರಿಗೆ ಸದರಿ ಆಸ್ತಿಯನ್ನು ಬರೆದುಕೊಡುವ ಹಕ್ಕು ಯಾವ ರೀತಿ ಬಂದಿರುತ್ತದೆ ಎಂದು ಕ್ರಯ ಪತ್ರದಲ್ಲಿ ಬರೆಸಿರುವುದಿಲ್ಲ. ದಿ. 15.02.1948 ರಂದು ಕಾಮಟ್ಟಂ ಗೋವಿಂದಪ್ಪ ರವರು ಜೋಗಿ ಚಿಕ್ಕರಾಮಪ್ಪ ರವರ ಮಗ ಜೋಗಿ ರಾಮಸ್ವಾಮಿ, ಜೋಗಿ ದೊಡ್ಡರಾಮಣ್ಣ, ವೆಂಕಟಸ್ವಾಮಿ ಹಾಗೂ ಕುಂಟ ರಾಮಣ್ಣ ರವರಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯೂ ಉತ್ತರಿಸದೇ ಸುಮ್ಮನೇ ನಿಂತಿರುತ್ತಾರೆ. ಸದರಿ 4 ಜನರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**12.** ರಾಮಸ್ವಾಮಿ ರವರು ಕಾಮಟ್ಟಂ ಗೋವಿಂದಪ್ಪನಿಗೆ ಮಾರಾಟ ಮಾಡುವ ಹಕ್ಕು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ–97 ರಿಂದ 100 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.